ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 1069/2021

ಸಿ ಡಬ್ಲ್ಯ್ಯೂ-6

ಪಿ ಡಬ್ಲ್ಯ್ಯೂ- 4

ದಿಃ 07-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಹರೀಶ್ ಓಮು ಗೌಡ |
| ತಂದೆಯ ಹೆಸರುಃ | ಓಮು ಗೌಡ |
| ವಯಸ್ಸುಃ | 32 ವರ್ಷ |
| ಉದ್ಯೋಗಃ | ನ್ಯಾಯಾಲಯದ ಆದೇಶ ಜಾರಿಕಾರ |
| ವಿಳಾಸಃ | ಸೀ ಬರ್ಡ್ ಕಾಲೋನಿ, ಹಟ್ಟಿಕೇರಿ |

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ದಿ 30-07-2021 ರಂದು ನಾನು ಕೆಲಸ ಮುಗಿಸಿ ಕಾರವಾರದಿಂದ ಅಂಕೋಲಾ ಕಡೆಗೆ ನಾನು ಮತ್ತು ಮೃತ ರವಿ ಲೋಕು ಗೌಡ ಬೈಕ್ ಸಂಖ್ಯೆ ಕೆಎ-31-ಡಬ್ಲ್ಯೂ 9212 ಮೇಲೆ ಬರುತ್ತಿರುವಾಗ ಹಾರವಾಡ ಕ್ರಾಸ್ ಬಳಿ ಟಿಪ್ಪರ್ ಚಾಕಲನು ಯಾವುದೇ ರೀತಿಯ ಸನ್ನೆಯನ್ನು ಮಾಡದೆ ಟಿಪ್ಪರ್ ಅನ್ನು ಅಚನಕ್ ಆಗಿ ಹಾರವಾಡ ಕ್ರಾಸ್ ಹತ್ತಿರ ಯು ಟರ್ನ್ ತೆಗೆದಿಕೊಂಡಿರುತ್ತಾನೆ. ಟಿಪ್ಪರ್ ವಾಹನದ ಹಿಂದೆ ನಮ್ಮ ಬೈಕ್ ಇರುತ್ತದೆ. ಟಿಪ್ಪರ್ ಚಾಕಲನ ಅಜಾಗರುಕತೆಯಿಂದ ಟಿಪ್ಪರ್ ವಾಹನವನ್ನು ಅಚನಕ್ ಆಗಿ ತಿರುಗಿಸಿದ್ದರಿಂದ ಅಪಘಾತವಾಗಿರುತ್ತದೆ. ಅಪಘಾತದಿಂದ ನನಗೆ ಎಡಗಾಲಿನ ಬಲ ಮಂಡಿಯ ಕೆಳಗೆ ತೀವ್ರವಾದ ಗಾಯವಾಗಿದ್ದು ಹಾಗೂ ರವಿ ಲೋಕು ಗೌಡ ಇವರಿಗೆ ಗಂಭೀರ ಗಾಯವಾಗಿದ್ದರಿಂದ ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನಂತರ ಐ.ಆರ್.ಬಿ. ಆ್ಯಂಬುಲೆನ್ಸ್ ಮುಖಾಂತರ ಅಂಕೋಲಾ ಸರ್ಕಾರಿ ಆಸ್ಪತ್ರೆಗೆ ಕರೆ ತರಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗೆಗಾಗಿ ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆ ತರಲಾಯಿತು. ಅಲ್ಲಿಂದ ಮತ್ತೆ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಟಿಪ್ಪರ್ ವಾಹನದ ಸಂಖ್ಯೆ ಎ.ಆರ್.02 /2941 ಆಗಿರುತ್ತದೆ. ನ್ಯಾಯಾಲಯದ ಮುಂದರೆ ಇರುವ ಆರೋಪಿಯನ್ನು ನಾನು ನೋಡಿರುತ್ತೇನೆ. (ಆರೋಪಿ ಪರ ವಕೀಲರು ಸದರಿ ಪ್ರಶ್ನೆಗೆ ತಕರಾರನ್ನು ಎತ್ತಿರುತ್ತಾರೆ). ಅಪಘಾತವಾದಾಗ ಸಮಯ ಸಂಜೆ 06.30 ಘಂಟೆ ಆಗಿರುತ್ತದೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲನ್ನು ಆರೋಪಿತರಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.